3. 1) ಜನವರಿ – 1993ರ ಕೊನೆಯವರೆಗೆ ಆರ್ಥಿಕ ಪ್ರಗತಿ ರೂ. 225.0 ಲಕ್ಷಗಳು.

(ವೈ-ಪಂಕ್ತೀಕರಣದ ಆಳಕಾಲುವೆ ಕೆಲಸ)

2) ಉಳಿಕೆ ಕೆಲಸಕ್ಕೆ ತಗಲುವ ವೆಚ್ಚ ರೂ. 1126.62 ಲಕ್ಷಗಳು.

4. ಡಿಸೆಂಬರ್ 1993ರ ವೇಳೆಗೆ ಈ ಕೆಲಸವನ್ನು ಮುಗಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

5. ತುಮಕೂರು ಶಾಖಾ ನಾಲೆಯಲ್ಲಿ 26 ವಿತರಣಾ ನಾಲೆಗಳು ಮತ್ತು ನಾಗಮಂಗಲ ಶಾಖಾ ನಾಲೆಯಲ್ಲಿ 15 ವಿತರಣಾ ನಾಲೆಗಳಿವೆ. ಈ ಪೈಕಿ ತುಮಕೂರು ಶಾಖಾ ನಾಲೆಯಲ್ಲಿ 12 ಹಾಗೂ ನಾಗಮಂಗಲ ಶಾಖಾ ನಾಲೆಯಲ್ಲಿ 8 ವಿತರಣಾ ನಾಲೆಗಳಿಗೆ ವಾಟರ್ ಪ್ಲಾನಿಂಗ್ ಅನುಮೋದನೆಯಾಗಿದ್ದು, ವಿತರಣಾ ನಾಲೆಯ ಕಾಮಗಾರಿಗಳು ಈಗಾಗಲೇ ಪ್ರಾರಂಭವಾಗಿದ್ದು, ಅವುಗಳ ಪ್ರಗತಿಯು ವಿವಿಧ ಹಂತಗಳಲ್ಲಿವೆ. ತುಮಕೂರು ಶಾಖಾ ನಾಲೆಯಲ್ಲಿ 247 ಹಾಗೂ ನಾಗಮಂಗಲ ಶಾಖಾ ನಾಲೆಯಲ್ಲಿ 143 ಅಡ್ಡಮೋರಿಗಳು ಬರಲಿದ್ದು, ಅವುಗಳಲ್ಲಿ ತುಮಕೂರು ಶಾಖಾ ನಾಲೆಯಲ್ಲಿ 199ಹಾಗೂ ನಾಗಮಂಗಲ ಶಾಖಾ ನಾಲೆಯಲ್ಲಿ 132ಅಡ್ಡಮೋರಿಯ ಕೆಲಸಗಳಿಗೆ ಅಂದಾಜು-ಪಟ್ಟಿಯನ್ನು ತಯಾರಿಸಲಾಗಿದೆ. ಆ ಪೈಕಿ ತುಮಕೂರು ಶಾಖಾ ನಾಲೆಯಲ್ಲಿ 160 ಹಾಗೂ ನಾಗಮಂಗಲ ಶಾಖಾ ನಾಲೆಯಲ್ಲಿ 102 ಅಡ್ಡಮೋರಿ ಕೆಲಸಗಳ ಅಂದಾಜುಪಟ್ಟಿಗೆ ಮಂಜೂರಾತಿ ನೀಡಲಾಗಿದೆ. ಒಟ್ಟು ಅಡ್ಡ ಮೋರಿಗಳಲ್ಲಿ 210 ಅಡ್ಡಮೋರಿಯ ಕೆಲಸಗಳು ಪ್ರಗತಿಯಲ್ಲಿದೆ ಹಾಗೂ 52 ಅಡ್ಡ ಮೋರಿಯ ಕೆಲಸವು ಪೂರ್ಣಗೊಂಡಿರುತ್ತದೆ. ಮೇಲಿನ ಎಲ್ಲಾ ಅಡ್ಡಮೋರಿಯ ಕೆಲಸಗಳ ಅಂದಾಜು ವೆಚ್ಚವು ಸುಮಾರು ರೂ. 4,866.46 ಲಕ್ಷಗಳಾಗಿರುತ್ತದೆ.

6. ತುಮಕೂರು ಶಾಖಾ ನಾಲೆಯಲ್ಲಿ ಕಿ.ಮೀ. 0 ರಿಂದ 76.00 ವರೆಗೆ, 1 ರಿಂದ 12 ನೇ ವಿತರಣಾ ನಾಲೆ ಕೆಲಸಗಳು ಹಾಗೂ ನಾಗಮಂಗಲ ಶಾಖಾ ನಾಲೆಯ ಕಿ.ಮೀ.0 ರಿಂದ 40 ರವರೆಗೆ 1 ರಿಂದ 5 ಹಾಗೂ 8, 9 ವಿತರಣಾ ನಾಲೆ ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ.
ಈ ವಿತರಣಾ ನಾಲೆಯ ಕೆಲಸಗಳನ್ನು ಪೂರೈಸಿ 1992-93ರಿಂದ ಪ್ರಾರಂಭಿಸಿ ಹಂತಹಂತವಾಗಿ 1996-97ರವರೆಗೆ ನೀರಾವರಿ ಸಾಮರ್ಥ್ಯ ಕಲ್ಪಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ.

ಹೈದರಾಬಾದ್-ಕರ್ನಾಟಕ ಪ್ರದೇಶಗಳಲ್ಲಿನ ರಸ್ತೆಗಳ ದುರಸ್ತಿ

124 (197) ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಹೈದ್ರಾಬಾದ್-ಕರ್ನಾಟಕ ಪ್ರದೇಶಗಳಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಅತ್ಯಂತ ದುಸ್ಥಿತಿ ತಲುಪಿರುವುದನ್ನು ಸರ್ಕಾರದ ಗಮನಕ್ಕಿದೆಯೇ;

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹೈದ್ರಾಬಾದ್-ಕರ್ನಾಟಕ ಪ್ರದೇಶಗಳಲ್ಲಿನ ರಸ್ತೆಗಳ ಅಭಿವೃದ್ಧಿಯನ್ನು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಶಾಸಕರ ಹೆಸರಿನಲ್ಲಿ 25 ಲಕ್ಷ ರೂ.ಗಳನ್ನು ನೀಡುವ ವಿಚಾರದ ಬಗ್ಗೆ ಸರ್ಕಾರದ ಪರಿಶೀಲಿಸುತ್ತಿದೆಯೇ ? (ಈಗ ಅಭಿವೃದ್ಧಿಯ ಕಾರ್ಯದ ಸಲುವಾಗಿ ಶಾಸಕರ ಹೆಸರಿನಲ್ಲಿ ನೀಡುತ್ತಿರುವ 50 ಲಕ್ಷ ರೂ.ಗಳು ಅನುದಾನವನ್ನು ಹೊರತುಪಡಿಸಿ);

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾದ ಗಮನದಲ್ಲಿದೆ.

ಆ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ಅಭಿವೃದ್ಧಿ ಯೋಜನೆ ಅಡಿ ಲೋಕೋಪಯೋಗಿ ಇಲಾಖೆ ರಸ್ತೆಗಳ ವಿಶೇಷ ಅಭಿವೃದ್ಧಿಯನ್ನು ಸುಮಾರು 6585 ಲಕ್ಷ ರೂ.ಗಳ ಅಂದಾಜಿನಲ್ಲಿ 1990–91ನೇ ಸಾಲಿನಲ್ಲಿ ತೆಗೆದುಕೊಂಡಿದ್ದು ಅಭಿವೃದ್ಧಿ ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದೆ. ಅನುದಾನ ಲಭ್ಯತೆಯನ್ನು ಸರಿಸಿ ಒಟ್ಟು 4 ವರ್ಷಗಳ ಅವಧಿಯಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು.

ಇ) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಶಾಸಕರ ಹೆಸರಿನಲ್ಲಿ 25 ಲಕ್ಷ ರೂ.ಗಳನ್ನು ನೀಡುವ ಪ್ರಸ್ತಾಪವು ಇರುವುದಿಲ್ಲ.

ಧಾರವಾಡ ಜಿಲ್ಲಾ ಪರಿಷತ್ ರಸ್ತೆಗಳ ಡಾಂಬರೀಕರಣದ ವಿವರ

132 (303) ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪರಿಷತ್, ಧಾರವಾಡ ಇವರು ಎಷ್ಟು ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಲು ಯೋಜನೆ ಮಾಡಿದ್ದರು, ಹಾಗೂ ಸರ್ಕಾರದಿಂದ ಮಂಜೂರಾದ ಕಿ.ಮೀ. ಎಷ್ಟು;

ಆ) 1990–91, 91–92, ಹಾಗೂ 92–93ರಲ್ಲಿ ಪೂರ್ತಿ ಮಾಡಿದ ಡಾಂಬರೀಕರಣ ರಸ್ತೆ ಎಷ್ಟು (ಕಿ.ಮೀ.ಗಳಲ್ಲಿ);

ಇ) ಬೆಳಗಾಂವ್ ಜಿಲ್ಲಾಪರಿಷತ್ತಿನವರು ಎಷ್ಟು ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಿರುವುದು;

ಈ) ಧಾರವಾಡ ಜಿಲ್ಲಾಪರಿಷತ್ತಿನವರು ಮಂಜೂರಾದ ಡಾಂಬರ್ ರಸ್ತೆಯನ್ನು ಡಾಂಬರೀಕರಣ ಮಾಡದೇ ಇರಲು ಕಾರಣವೇನು;

ಉ) ಮಂಜೂರಾದ ಡಾಂಬರ್ ರಸ್ತೆಯನ್ನು ಪೂರ್ಣ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ;

ಊ) ಈ ರಸ್ತೆಗಳನ್ನು ಡಾಂಬರೀಕರಣ ಮೊದಲು ನೇಮಿಸಿರುವ ಕಂಟ್ರ್ಯಾಕ್ಟದಾರರುಗಳು ಯಾರ್ಯಾರು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) 1992–93ನೇ ಸಾಲಿನಲ್ಲಿ ಧಾರವಾಡ ಜಿಲ್ಲಾ ಪರಿಷತ್‌ನ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ಒಟ್ಟು 20ಕಿ.ಮೀ. ಗಳಿಗೆ ಡಾಂಬರೀಕರಣ ಮಾಡಲು ಯೋಜಿಸಲಾಗಿದೆ. ಸರ್ಕಾರದ ಮಂಜೂರಾತಿಯ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಧಾರವಾಡ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ 1990–91ರಲ್ಲಿ 1 ಕಿ.ಮೀ. 1991–92ರಲ್ಲಿ 6 ಕಿ.ಮೀ. ಡಾಂಬರೀಕರಣ ಮಾಡಿ ಮುಗಿಸಲಾಗಿದೆ. 1992–93ನೇ ಸಾಲಿನಲ್ಲಿ ಇಲ್ಲಿಯವರೆಗೆ 3ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಿ ಮುಗಿಸಲಾಗಿದೆ.